ಆದರೆ, ಈಕೆಗೆ ಪ್ರತಿಯೊಂದಕ್ಕೂ ಬೇರೆಯವರೇ ನೆರವಾಗಬೇಕು. ವಳಗೆರೆ ಭಾಸ್ಕರರಾಯ ಎಂದರೆ ಏನು ಸಾಮಾನ್ಯರೇ... ದೊಡ್ಡ ಜಮೀನುದಾರರು. ಬೇರೆಯವರಿಗೆ ಸಹಾಯ ಮಾಡಲು ಸದಾ ಸಿದ್ಧರು. ಅದರಲ್ಲಿಯೂ ಸಹಾಯ ಕೇಳಿ ಬರುವ ಹೆಣ್ಣು ಮಕ್ಕಳನ್ನು ಬರಿಗೈಯಲ್ಲಿ ಹಾಗೆಯೇ ಕಳುಹಿಸಿದವರಲ್ಲ; ಹೆಣ್ಣು ಮಕ್ಕಳಿಗೆ ನಿರಾಶೆ ಮಾಡಿದವರಲ್ಲ. ಹೌದಪ್ಪಾ... ತಿಂಗಳುಗಟ್ಟಲೆ ಈಕೆ ಧರಿಸಿದ್ದ ವಸ್ತ್ರ ಬದಲಿಸಿ, ಇವಳು ಮಲಗಿರೋ, ಹೊಲಸು ನಾರೋ ಹಾಸಿಗೆ, ಚಾದರ ಬದಲಿಸಲು ಯಾರಾದರೂ ಗಂಡಸರು ಮುಂದೆ ಬಂದಾರೆಯೇ? ಹಾಗೆ ಬಂದರೂ ಈ ನನ್ನ ಹೆಂಡತಿ ಅದಕ್ಕೆ ಒಪ್ಪುತ್ತಾಳೆಯೇ? ಹಾಗಾಗಿಯೇ... ನಿನ್ನ ಚಿಕ್ಕಮ್ಮನಂಥ ಹೆಂಗಸರು ಬಂದಾಗ...' ಹೇಳಹೇಳುತ್ತಾ ಭಾಸ್ಕರರಾಯರ ಕಂಠ ಬಿಗಿದುಬಂತು... ಮತ್ತೆ ಮುಂದೆ ಮಾತನ್ನಾಡಲಾಗದೆ ಅವರು ತಮ್ಮ ತಳ್ಳು ಕುರ್ಚಿಯನ್ನು ತಳ್ಳಿಕೊಂಡು ಕಿರು ಕೋಣೆಯತ್ತ ಹೋದರು.

ಮಂಗಲಾಳತ್ತ ನೋಡಿದೆ ನಾನು.

'ಆಯಿತು... ನೀನು ಹೊರಗೆ ಹೋಗು. ನಾನು ಅವರ ಬಟ್ಟೆ ಬದಲಿಸುತ್ತೇನೆ. ಅವರ ಹಾಸಿಗೆ ವಸ್ತ್ರ ಎಲ್ಲಾ ಬದಲಿಸುತ್ತೇನೆ' ಎಂದಳು ಮಂಗಲಾ.

ವಳಗೆರೆಯ ಭಾಸ್ಕರರಾಯರ ಒಳಗಿನ ಮುಖವನ್ನು ಕಂಡಿದ್ದೆ ನಾನು ಈಗ.

## ಟಿ.ಎಂ. ಸುಬ್ಬರಾಯ

ಅರವತ್ತರ ದಶಕದಿಂದಲೂ ಕತೆ, ಕಾದಂಬರಿಗಳನ್ನು ಬರೆಯುತ್ತಿರುವ ಟಿ.ಎಂ.ಸುಬ್ಬರಾಯರು ಮೂಲತಃ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಭಾರಂಗಿ ಹೋಬಳಿಯ ತೆಂಕೋಡುಮನೆಯವರು. ಪ್ರಸ್ತುತ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ನೆಲೆಸಿದ್ದಾರೆ. ಅವರು 60 ಕಾದಂಬರಿಗಳನ್ನು ರಚಿಸಿದ್ದಾರೆ. ಕಥಾಸಂಗ್ರಹಗಳು, ಪ್ರವಾಸ ಕಥನಗಳನ್ನು ಬರೆದಿರುವ ಅವರು ಅಂಕಣ ಬರಹಗಳಲ್ಲೂ ತಮ್ಮ ಛಾಪನ್ನು ಮೂಡಿಸಿದ್ದಾರೆ. ಅವರ ಆತ್ಮಕತೆ: 'ರಾಯ ಕೇಳೆಂದ'. ಇವರು ಯಕ್ಷಗಾನ ಪ್ರಸಂಗ ಕರ್ತೃವೂ ಕೂಡ: ಏಳು ಯಕ್ಷಗಾನ ಕೃತಿಗಳನ್ನು ರಚಿಸಿದ್ದಾರೆ. ಶಿಕ್ಷಕ ವೃತ್ತಿಯಿಂದ ಅವರೀಗ ನಿವೃತ್ತರು.